ಊ) ನಬಾರ್ಡ್ ಅಥವಾ ವಿಶ್ವಬ್ಯಾಂಕಿನ ನೆರವಿನಿಂದ ಕಾಮಗಾರಿ ಪ್ರಾರಂಭಿಸುವ ಬಗ್ಗೆ ಸರ್ಕಾರದಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಋ) ಪಿ.ಪಿ.ಪಿ. – ವಿ.ಜಿ.ಎಫ್. (ಶುಲ್ಕ) ಆಧಾರದ ಮೇಲೆ ಕೈಗೊಳ್ಳಲು ಉದ್ದೇಶಿಸಿದ್ದು, ವಿ.ಜಿ. ಎಫ್ 38%, ಕೇಂದ್ರದ ಪಾಲು 20% ಹಾಗೂ ರಾಜ್ಯದ ಪಾಲು 18% ಆಗಿರುತ್ತದೆ.

ಋ) Consortium ರವರೊಂದಿಗೆ ಗುತ್ತಿಗೆ ಕರಾರು ಮಾಡಿಕೊಂಡು Financial closer ಆದ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ವಸತಿ ಗೃಹಗಳು

1051 (1257) ಶ್ರೀ ಸುಧಾಷ್ ಆರ್. ಗುತ್ತೇದಾರ್ (ಅಳಂದ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಳಂದ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ವಸತಿಗೃಹಗಳ ಸಂಖ್ಯೆ ಎಷ್ಟು ಮತ್ತು ಯಾವುವು; ಅವುಗಳ ವಿಸ್ತೀರ್ಣ ಸಹಿತ ಪೂರ್ಣ ಮಾಹಿತಿ ನೀಡುವುದು;

ಆ) ಲೋಕೋಪಯೋಗಿ ಇಲಾಖೆಯ ಕಛೇರಿ ನಿವೇಶನದ ಒಟ್ಟು ವಿಸ್ತೀರ್ಣದ ಅಳತೆ ಎಷ್ಟು (ಎಕರೆ, ಗುಂಟೆವಾರು ಮಾಹಿತಿ ನೀಡುವುದು);

ಇ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ಜಮೀನನ್ನು ಖಾಸಗಿಯವರು ಅಕ್ರಮ ಪ್ರವೇಶ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಅತಿಕ್ರಮ ಪ್ರವೇಶ ಮಾಡಿರುವವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು)?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಅಳಂದ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ಒಟ್ಟು ವಸತಿಗೃಹಗಳ ಸಂಖ್ಯೆ 10. ಸದರಿ ವಸತಿಗೃಹಗಳ ವಿವರ ಮತ್ತು ವಿಸ್ತೀರ್ಣ ಈ ಕೆಳಕಂಡಂತಿರುತ್ತವೆ.

ವಸತಿ ಗೃಹ ಸಂಖ್ಯೆ	ವಿಸ್ತೀರ್ಣ (ನಿವೇಶನ) ಚದರ ಅಡಿಯಲ್ಲಿ)
17:ಬಿ	4588.21
17:ಬಿ	4588.21
18	3576.54
14	4331.21
19: ಬಿ	1564.00
19: ಎ	1564.00
13: ಎ	1912.50
13: ಬಿ	1912.50
20: ಬಿ	1368.75
20: ಎ	1368.75

ಆ) ಲೋಕೋಪಯೋಗಿ ಇಲಾಖೆಯ ಉಪ ವಿಭಾಗ ಕಚೇರಿಯ ನಿವೇಶನದ ಒಟ್ಟು ವಿಸ್ತೀರ್ಣ 0 ಎಕರೆ 26.37 ಗುಂಟೆ ಇರುತ್ತದೆ.

ಇ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ಜಮೀನಿನಲ್ಲಿ ಖಾಸಗಿಯವರು ಅಕ್ರಮ ಪ್ರವೇಶ ಮಾಡಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉದ್ಯಾನವನ ನಿರ್ಮಿಸುವುದು

1053 (1259) ಶ್ರೀ ಸುಭಾಷ ಆರ್. ಗುತ್ತೇದಾರ್ (ಆಳಂದ) : ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಳಂದ ತಾಲ್ಲೂಕಿನ ಅಮರ್ಜಾ ಅಣೆಕಟ್ಟು ಪ್ರದೇಶದಲ್ಲಿ ಉದ್ಯಾನವನ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ನಿರ್ಮಿಸಲಾಗುವುದು;

ಇ) ಹಾಗಿದ್ದಲ್ಲಿ, ಅಣೆಕಟ್ಟು ಕೆಳಭಾಗದಲ್ಲಿ ಸರ್ಕಾರಿ ಜಮೀನಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;